## ಸಮುದ್ರ ಮಥನ



### ಕರಾಳ ಸತ್ಯ

ಮಕ್ಕಳು ಮನೆ ಬಿಡುವುದೇಕೆ?' ರಾಜಲಕ್ಷ್ಮಿ ಅಂಕಲಗಿ ಅವರ ಮುಖಪುಟ ಲೇಖನ (ಸುಧಾ, ಮಾ.23) ಸಮಗ್ರವಾಗಿದೆ. ಇದರಲ್ಲಿನ ಮಾಹಿತಿ ಓದಿದಾಗ ಮನಸ್ಸು ಆತಂಕಗೊಂಡಿತು. ಲೇಖಕಿ ಒಂದು ಕರಾಳ ಸತ್ಯದ ವಿಶ್ವರೂಪ ದರ್ಶನ ಮಾಡಿಸಿದ್ದಾರೆ. ಮಕ್ಕಳ ಕಾಳಜಿ ಹಾಗೂ ಚಿಕ್ಕಮಕ್ಕಳು ಎಲ್ಲಾದರೂ ಕಂಡಾಗ ಸಾರ್ವಜನಿಕರು ಅನುಸರಿಸಬೇಕಾದ ವಿಷಯಗಳ ಬಗ್ಗೆ ಲೇಖನ ಕಣ್ತೆರೆಸುವಂತಿದೆ. ಎಲ್ಲ ಪೋಷಕರು ತಪ್ಪದೇ ಓದಬೇಕಾದ ಲೇಖನವಿದು.

—ಕೆ.ಎಂ. ಮಧ್ವರಾಯ ಬೆಂಗಳೂರು, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ, ಎಚ್.ಆನಂದಕುಮಾರ್ ಚಿತ್ರದುರ್ಗ, ಬೆಳ್ಳಾವೆ ರಮೇಶ್ ಬೆಂಗಳೂರು, ನೀಲಮ್ಮ ಕುಮಾರಪ್ಪ ಲಿಂಗಸಗೂರು

### ಮಹತ್ವಪೂರ್ಣ

ವಿಚಾರ ಲಹರಿಯಲ್ಲಿ 'ವಿರಹ ಮಿಲನ' (ತೋಷ) ಬರಹ ಮಹತ್ವಪೂರ್ಣ. ಅಗಲುವಿಕೆಯಲ್ಲಿ ವಿರಹ ಉಂಟಾದರೆ ಪುನರ್‌ಮಿಲನದ ತುಡಿತ ಒಂದು ರೀತಿಯ ಖುಷಿ ಕೊಡುತ್ತದೆ. ಸಂತ ಮೀರಾಬಾಯಿ ಅವರ ಭಜನೆಗಳಲ್ಲೂ ಇದನ್ನು ಚೆನ್ನಾಗಿ ವಿವರಿಸಲಾಗಿದೆ. ತುಡಿತ ಇದ್ದರೆ ಮಾತ್ರ ಸಾಧಿಸುವ ಹಂಬಲ ಇರುತ್ತದೆ.

—ಮಹಾವೀರ ಕಾಸರ ಶಿವಮೊಗ್ಗ, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

### ದೇಸಿ ತಳಿ

'ಭಪ್ಪರೇ ಹಿಂಗಾರಿ ಜೋಳ' (ಆನಂದತೀರ್ಥ ಪ್ಯಾಟಿ) ಚಿತ್ರ ಲೇಖನ ಚೆನ್ನಾಗಿದೆ. ನಮ್ಮ ದೇಸಿ ತಳಿಗಳ ಸಂಗ್ರಹ ಜತನದಲ್ಲಿ ತೊಡಗಿರುವ ಹಾವೇರಿ, ಧಾರವಾಡ, ಗದಗ ಮುಂತಾದ ನಾಡಿನವರೇ ನಮಗೆ ರೊಟ್ಟಿ ಕೊಡುವವರು. ಅರೆ ಮಳೆಗಾಲದಲ್ಲೂ ದೇಸಿ ತಳಿ ಸಮೃದ್ಧ ಫಸಲು ತೆಗೆದ ತೋಟಗಿಯವರಂಥ ರೈತರು ಬೇಕಾಗಿದ್ದಾರೆ.

—ಕೊಹಿಮ ಬಸರಕೋಡು

### ಮನಮೋಹಕ

'ಪಶ್ಚಿಮ ಘಟ್ಟದ ಮೋಹಕ ಕೋಟೆ' (ಜಿ.ಆರ್.ಪಂಡಿತ್ ಸಾಗರ) ಚಿತ್ರ ಬರಹ ಮನಮೋಹಕ. ಇಲ್ಲಿನ ಕೋಟೆ ಕೊತ್ತಲಗಳು ನಾನೂರರಿಂದ ಐನೂರು ವರ್ಷಗಳಷ್ಟು ಹಳೆಯವಾದರೂ ಇನ್ನೂ ಸುಸ್ಥಿತಿಯಲ್ಲಿವೆ.

—ಬಿ.ಎಂ. ಶಿವಲಿಂಗೇಗೌಡ ಬೇವಿನಹಳ್ಳಿ, ಕೆ.ಎಸ್.ರಾಜಾರಾಮ್ ಬೆಂಗಳೂರು

### ಕುತೂಹಲಕಾರಿ

'ಶುಭ ಶಕುನದ ರತ್ನ ಪಕ್ಷಿ' (ಸುಭಾಸ ಯಾದವಾಡ) ಬರಹ ಕುತೂಹಲಕಾರಿ. ಈ ಪಕ್ಷಿಯನ್ನು ಮುಂಜಾನೆ ನೋಡಿದರೆ ಶುಭಶಕುನ ಎನ್ನುತ್ತಾರೆ ನಮ್ಮ ಹಳೆ ತಲೆಮಾರಿನ ಜನ.

—ಪ.ಚಂದ್ರಕುಮಾರ ಗೌನಹಳ್ಳಿ ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ಮುದ ನೀಡಿತು

'ಎಳೆಯರ ಅಂಗಳ'ದಲ್ಲಿ ಎರಡು ಕಂತುಗಳಲ್ಲಿ ಪ್ರಕಟವಾದ 'ಅಂಗೈಯಲ್ಲಿ ಅರಮನೆ' (ಶಿವಮೊಗ್ಗ ಗೀತಾಶಾಸ್ತ್ರಿ) ಜಾನಪದ ಕಥೆ ಮುದ ನೀಡಿತು.

—ರತ್ನಾಕರ ಹೆಗಡೆಕಟ್ಟೆ ಮೂಡಬಿದರೆ

### ಮಾರ್ಮಿಕ ಕಥೆ

ಕಥೆ 'ವೈಕುಂಠ' (ಕಮಲಾಮೂರ್ತಿ) ಮಾರ್ಮಿಕವಾಗಿದ್ದು ನೀತಿಪಾಠದಂತಿದೆ. ಜತೆಗೆ ಚಿಂತನೆ ಒರೆಗೆ ಹಚ್ಚುವಂತಿದೆ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು, ನಾರಾಯಣಯಾಜಿ ಶಿರಾಲಿ, ಹರ್ಷಿತಾ ಹುಬ್ಬಳ್ಳಿ, ಉಮೇಶ್ ಕೋಟ್ಯಾನ್ ಬೆಳ್ತಂಗಡಿ

### ಸುಖೀ ದಾಂಪತ್ಯ

ಇತ್ತೀಚಿನ ಸುಖೀ ದಾಂಪತ್ಯ (ಡಾ.ವಿನೋದ ಛೆಬ್ಬಿ) ಅಂಕಣದಲ್ಲಿ ಪ್ರಕಟವಾಗುವ ವಿಷಯಗಳು ಒಂದೇ ದಂಪತಿಯ ಕುರಿತಾಗಿದ್ದು ಕಳೆದ ನಾಲ್ಕೈದು ಸಂಚಿಕೆಗಳಿಂದಲೂ ಚ್ಯೂಯಿಂಗ್ ಗಮ್‌ನಂತೆ ಎಳೆಯುತ್ತಾ ಬರಲಾಗಿದೆ. ಈ ವಿಚಾರ ಓದಿ ಓದಿ ಬೋರಾಗುವಷ್ಟಾಗಿದೆ. ಈ ವೈದ್ಯರು ಲೈಂಗಿಕತೆಯ ಇತರ ಆಯಾಮ ಗಳತ್ತಲೂ ಗಮನಹರಿಸುವುದು ಒಳ್ಳೆಯದು.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಹೊಸ ಅಂಕಣ

### ಸವಿ ಸವಿ ನೆನಪು..

ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಚಿತ್ರ ಸಮೇತ ನಮಗೆ ಕಳುಹಿಸಿ. ವಿಭಿನ್ನವೆನಿಸಿದ ಬರಹವನ್ನು 'ಸುಧಾ'ದಲ್ಲಿ ಪ್ರಕಟಿಸುತ್ತೇವೆ.

(ಸಂ)

### ತಪ್ಪು ಮಾಹಿತಿಗಾಗಿ ವಿಷಾದ

'ಎಲ್ಲಿಂದಲೋ ಬಂದವರು' (ಅವನೀಶ್) ಲೇಖನದಲ್ಲಿ ಡಾ. ಕ್ಲೌಸ್ ಹೀಮ್ಸ್ ಅವರ ಬಗ್ಗೆ ವಿವರಣೆಯಿದ್ದು, ಕೆಲವೊಂದು ತಪ್ಪು ಮಾಹಿತಿಗಳು ನುಸುಳಿವೆ. ಡಾ.ಕ್ಲೌಸ್ ಜರ್ಮನ್ ಬೆಂಗಳೂರಿನ ಮ್ಯಾಕ್ಸ್‌ಮುಲ್ಲರ್ ಭವನದ ಗೊಯತೆ ಇನ್ಸ್‌ಟಿಟ್ಯೂಟ್ ನಲ್ಲಿರುವ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದ ಮುಖ್ಯಸ್ಥರು. ಇಲ್ಲಿ ಜರ್ಮನ್ ಭಾಷೆ, ಕಲೆಯನ್ನು ಪ್ರಚಾರ ಮಾಡಲಾಗುತ್ತದೆ. ಈ ಸಂಬಂಧ ಡಾ.ಕ್ಲೌಸ್ ದೇಶದಾದ್ಯಂತ ಪ್ರವಾಸ ಮಾಡುತ್ತಾರೆ. ಬರಹದಲ್ಲಿ ಕ್ಲೌಸ್ ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರು ಹಾಗೂ ಕ್ರಿಶ್ಚಿಯನ್ ಧರ್ಮ ಪ್ರಚಾರ ಕ್ಕಾಗಿ ದೇಶದಾದ್ಯಂತ ಪ್ರವಾಸ ಮಾಡುತ್ತಾರೆ ಎಂದು ತಪ್ಪಾಗಿ ಪ್ರಕಟವಾಗಿದೆ. ಇದಕ್ಕಾಗಿ ವಿಷಾದಿಸುತ್ತೇವೆ.

— ಸಂ



